# ಅಧ್ಯಾಯ–III

## ಹಣಕಾಸು ನಿರ್ವಹಣೆ

ಎಸ್‌ಪಿವಿಗಳು ಸರ್ಕಾರದ ಅನುದಾನಗಳನ್ನು ಹೊರತುಪಡಿಸಿ ಇತರ ಮೂಲಗಳಿಂದ ಬಹಳ ಕಡಿಮೆ ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯವಾಯಿತು, ಇದು ಅವುಗಳ ರಚನೆಯ ಉದ್ದೇಶವನ್ನು ಸೋಲಿಸಿತು.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವತ್ರಿಕ ಅಳವಡಿಕೆಗೆ ಅದರ ಸೂಕ್ತತೆಯ ಬಗ್ಗೆ ರಾಜ್ಯ ಸರ್ಕಾರವು ಇನ್ನೂ ನಿರ್ಧಾರ ತೆಗೆದುಕೊಳ್ಳದ ಕಾರಣ ಸಲಹೆಗಾರರು ಸಲ್ಲಿಸಿದ ಹಣಕಾಸು ಸುಧಾರಣಾ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ (ಜೂನ್ 2024).

ರಾಜ್ಯ ಮಟ್ಟದ ನೋಡಲ್ ಸಂಸ್ಥೆಯು ಸ್ಮಾರ್ಟ್ ಸಿಟಿ ಯೋಜನೆ/ಕೋಶಕ್ಕೆ ಸಂಬಂಧಿಸದ ಚಟುವಟಿಕೆಗಳಿಗೆ ₹0.75 ಕೋಟಿ ಖರ್ಚು ಮಾಡಿತ್ತು. ಪಿಎಂಸಿಗೆ ಮಾಡಿದ ಪಾವತಿಗಳಿಗೆ ಸಂಬಂಧಿಸಿದಂತೆ ಅಸಮರ್ಪಕ ಪರಿಶೀಲನೆಯಿಂದಾಗಿ ₹2.56 ಕೋಟಿ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

ಸಂಯೋಜಿತ ಆಜ್ಞಾ ಮತ್ತು ನಿಯಂತ್ರಣ ಕೇಂದ್ರಕ್ಕಾಗಿ (ಐಸಿಸಿಸಿ) ಮಾಸ್ಟರ್ ಸಿಸ್ಟಮ್ ಇಂಟಿಗ್ರೇಟರ್‌ನ ಸೇವಾ ಪೂರೈಕೆದಾರರು ನಿಗದಿತ ರೀತಿಯಲ್ಲಿ ಕೆಲಸವನ್ನು ಪೂರ್ಣಗೊಳಿಸಲು ವಿಫಲರಾಗಿದ್ದರೂ, ಎಸ್‌ಎಲ್‌ಎನ್‌ಎಯು ಕಾಮಗಾರಿಗಳ ವಿಳಂಬ ನಿರ್ವಹಣೆಗೆ ದಂಡ ವಿಧಿಸುವ ಮತ್ತು ಸಂಗ್ರಹಿಸುವ ಒಪ್ಪಂದದ ಬಾಧ್ಯತೆಯನ್ನು ಜಾರಿಗೊಳಿಸುವಲ್ಲಿ ವಿಫಲವಾಯಿತು. ಒಪ್ಪಂದದಲ್ಲಿ ನಿರ್ದಿಷ್ಟ ದಂಡದ ದರವನ್ನು ಸೂಚಿಸಲಾಗಿದ್ದರೂ, ದಿನಕ್ಕೆ ₹2,000 ಮಾತ್ರ ದಂಡ ವಿಧಿಸುವುದು ಸಮರ್ಥನೀಯವಾಗಿರಲಿಲ್ಲ.

### 3.1 ಎಸ್‌ಪಿವಿಗಳ ಹಣಕಾಸು ನಿರ್ವಹಣೆ

ಯೋಜನೆಯ ವಿವೇಚನಾಯುಕ್ತ ಹಣಕಾಸು ನಿರ್ವಹಣೆಯು ಯೋಜನೆಗಳ ಉದ್ದೇಶಿತ ಪ್ರಯೋಜನಗಳು ಯೋಜನೆಯಲ್ಲಿ ಕಲ್ಪಿಸಿದಂತೆ ಸಕಾಲದಲ್ಲಿ ಫಲಾನುಭವಿಗಳನ್ನು ತಲುಪುವುದನ್ನು ಖಚಿತಪಡಿಸುತ್ತದೆ. ಎಸ್‌ಸಿಎಂ ಒಂದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಭಾರತ ಸರ್ಕಾರವು ಮಿಷನ್‌ಗೆ ಪ್ರತಿ ನಗರಕ್ಕೆ ವರ್ಷಕ್ಕೆ ಸರಾಸರಿ ₹100 ಕೋಟಿ ಆರ್ಥಿಕ ನೆರವು ನೀಡಿತು. ರಾಜ್ಯ ಸರ್ಕಾರವು ಹೊಂದಾಣಿಕೆಯ ಆಧಾರದ ಮೇಲೆ ಸಮಾನ ಮೊತ್ತವನ್ನು ಕೊಡುಗೆಯಾಗಿ ನೀಡಿತು. ಜೂನ್–2024ರಲ್ಲಿದ್ದಂತೆ ಕರ್ನಾಟಕದ ಸ್ಮಾರ್ಟ್ ಸಿಟಿಗಳಿಗೆ ನಿಧಿಯ ಬಿಡುಗಡೆ ಮತ್ತು ವೆಚ್ಚವನ್ನು **ಕೋಷ್ಟಕ–3.1**ರಲ್ಲಿ ವಿವರಿಸಲಾಗಿದೆ.

### ಕೋಷ್ಟಕ–3.1: ಎಸ್‌ಪಿವಿಗಳಿಗೆ ಮಿಷನ್ ನಿಧಿಗಳ ಬಿಡುಗಡೆ ಮತ್ತು ಖರ್ಚು

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಸ್ಮಾರ್ಟ್ ಸಿಟಿಯ ಹೆಸರು | ಸ್ವೀಕರಿಸಿದ ನಿಧಿಗಳು | | | ವೆಚ್ಚ |
|---|---|---|---|---|---|
| | | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | ಒಟ್ಟು | |
| 1 | ಬೆಳಗಾವಿ | 490.00 | 500.00 | 990.00 | 859.14 |
| 2 | ಬೆಂಗಳೂರು | 488.00 | 500.00 | 988.00 | 812.06 |
| 3 | ದಾವಣಗೆರೆ | 490.00 | 500.00 | 990.00 | 830.82 |
| 4 | ಹುಬ್ಬಳ್ಳಿ–ಧಾರವಾಡ | 490.00 | 500.00 | 990.00 | 791.22 |
| 5 | ಮಂಗಳೂರು | 416.50 | 426.50 | 843.00 | 735.57 |
| 6 | ಶಿವಮೊಗ್ಗ | 490.00 | 500.00 | 990.00 | 904.20 |
| 7 | ತುಮಕೂರು | 490.00 | 500.00 | 990.00 | 855.15 |
| | **ಒಟ್ಟು** | **3,354.50** | **3,426.50** | **6,781.00** | **5,788.16** |

ಆಧಾರ: ಸ್ಮಾರ್ಟ್ ಸಿಟಿಗಳು ಒದಗಿಸಿದ ಮಾಹಿತಿ

## 3.2 ಮಿಷನ್ ನಿಧಿ ಸಂಗ್ರಹಣೆಗೆ ಹಣಕಾಸು ಸಂಪನ್ಮೂಲಗಳನ್ನು ಸಂಗ್ರಹಿಸದಿರುವುದು

ಮಿಷನ್ ಮಾರ್ಗಸೂಚಿಗಳ ಷರತ್ತು 11.3ರ ಪ್ರಕಾರ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೀಡುವ ನಿಧಿಯ ಜೊತೆಗೆ ಸಾಧ್ಯವಾದಷ್ಟು ದೊಡ್ಡ ವೆಚ್ಚದೊಂದಿಗೆ ನಗರಗಳು ಯೋಜನೆಗಳನ್ನು ರೂಪಿಸಬೇಕೆಂದು ನಿರೀಕ್ಷಿಸಲಾಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಮತ್ತು ಉಪಕ್ರಮಗಳ ಒಗ್ಗೂಡಿಸುವಿಕೆ, ಸ್ವಂತ ಸಂಪನ್ಮೂಲಗಳನ್ನು ಉತ್ಪಾದಿಸುವುದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳನ್ನು ಪ್ರಸ್ತಾಪಿಸುವುದು, ಮಾರುಕಟ್ಟೆ ಸಾಲಗಳು, ಮತ್ತು ಯೋಜನೆಗಳಿಗೆ ಸಮ ಪಾಲುದಾರರನ್ನು ಆಹ್ವಾನಿಸುವಂತಹ ಬಹು ಹಣಕಾಸು ಆಯ್ಕೆಗಳನ್ನು ನಗರಗಳು ಹೊಂದಿದ್ದವು. ಏಳು ಸ್ಮಾರ್ಟ್ ಸಿಟಿಗಳ ಎಸ್‌ಸಿಪಿಗಳಲ್ಲಿ ಕಲ್ಪಿಸಲಾದ ಮಿಷನ್ ಅನುದಾನಗಳನ್ನು ಹೊರತುಪಡಿಸಿ ಇತರ ಹಣಕಾಸು ಕಾರ್ಯವಿಧಾನವನ್ನು **ಕೋಷ್ಟಕ–3.2**ರಲ್ಲಿ ನೀಡಲಾಗಿದೆ.

### ಕೋಷ್ಟಕ–3.2: ಎಸ್‌ಸಿಪಿಗಳಲ್ಲಿ ಕಲ್ಪಿಸಲಾದ ಹಣಕಾಸು ಕಾರ್ಯವಿಧಾನ

(₹ ಕೋಟಿಗಳಲ್ಲಿ)

| ಸ್ಮಾರ್ಟ್ ಸಿಟಿ | ಆದಾಯ[16] ಗಳಿಸುವ ಯೋಜನೆಗಳು | 14ನೇ ಎಫ್‌ಸಿ | ಕೇಂದ್ರ ಮತ್ತು ರಾಜ್ಯ ಯೋಜನೆಗಳೊಂದಿಗೆ ಒಮ್ಮುಖತೆ[17] | ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಸದುಪಯೋಗಪಡಿಸಿಕೊಳ್ಳುವುದು | ಪಿಪಿಪಿ | ಒಟ್ಟು |
|---|---|---|---|---|---|---|
| ಬೆಳಗಾವಿ | 1,498.92 | 3.70 | 1,851.00 | ಇಲ್ಲ | 1,006.10 | 2,860.80 |
| ಬೆಂಗಳೂರು | 371.87 | ಇಲ್ಲ | 985.00 | | 234.28 | 1,219.28 |
| ದಾವಣಗೆರೆ | 4,325.04 | ಇಲ್ಲ | 168.00 | ಇಲ್ಲ | 168.00 | 335.56 |
| ಹುಬ್ಬಳ್ಳಿ–ಧಾರವಾಡ | 479.00 | ಇಲ್ಲ | 485.00 | 114 | 170.00 | 769.00 |
| ಮಂಗಳೂರು | 473.59 | ಇಲ್ಲ | 509.00 | ಇಲ್ಲ | 517.00 | 1,025.95 |

[16] ಮಾರುಕಟ್ಟೆ/ಅಂಗಡಿಗಳು, ವಾಹನ ಪಾರ್ಕಿಂಗ್, ಬೀದಿ ವ್ಯಾಪಾರಿಗಳು ಮತ್ತು ಡಿಜಿಟಲ್ ಜಾಹೀರಾತು ಫಲಕಗಳು ಇತ್ಯಾದಿಗಳ ಗುತ್ತಿಗೆಯ ಮೂಲಕ ಹಣವನ್ನು ಸಂಗ್ರಹಿಸುವುದು.

[17] ಅಮೃತ್ ಯೋಜನೆಯಡಿಯಲ್ಲಿ ಕೊಳಚೆನೀರು ಸಂಸ್ಕರಣಾ ಯೋಜನೆಯ ಒಮ್ಮುಖೀಕರಣ, ಎಸ್‌ಬಿಎಂ ಅಡಿಯಲ್ಲಿ ಶೌಚಾಲಯಗಳ ನಿರ್ಮಾಣ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಕೈಗೆಟುಕುವ ಮನೆಗಳ ನಿರ್ಮಾಣ ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಜಿಲ್ಲಾ ಆಸ್ಪತ್ರೆಯ ಮೇಲ್ದರ್ಜೇಕರಣ ಇತ್ಯಾದಿ.

| ಸ್ಮಾರ್ಟ್ ಸಿಟಿ | ಆದಾಯ[16] ಗಳಿಸುವ ಯೋಜನೆಗಳು | 14ನೇ ಎಫ್‌ಸಿ | ಕೇಂದ್ರ ಮತ್ತು ರಾಜ್ಯ ಯೋಜನೆಗಳೊಂದಿಗೆ ಒಮ್ಮುಖತೆ[17] | ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಸದುಪಯೋಗಪಡಿಸಿಕೊಳ್ಳುವುದು | ಪಿಪಿಪಿ | ಒಟ್ಟು |
|---|---|---|---|---|---|---|
| ಶಿವಮೊಗ್ಗ | 260.70 | ಇಲ್ಲ | 127.00 | ಇಲ್ಲ | 468.00 | 595.60 |
| ತುಮಕೂರು | ನಿರ್ದಿಷ್ಟಪಡಿಸಲಾಗಿಲ್ಲ | ಇಲ್ಲ | 883.00 | ಇಲ್ಲ | 344.00 | 1,227.00 |
| **ಒಟ್ಟು** | **7,409.12** | **3.70** | **5,008.00** | **114.00** | **2,907.38** | **8,033.19** |

ಆಧಾರ: ಕೆಯುಐಡಿಎಫ್‌ಸಿ/ಎಸ್‌ಪಿವಿಗಳು ಒದಗಿಸಿದ ಮಾಹಿತಿ

ಕೆಳಗೆ ವಿವರಿಸಿದಂತೆ ಮಿಷನ್ ಅನುದಾನಗಳನ್ನು ಹೊರತುಪಡಿಸಿ ಇತರ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಎಸ್‌ಪಿವಿಗಳು ವಿಫಲವಾಗಿವೆ ಎಂದು ಲೆಕ್ಕಪರಿಶೋಧನೆ ಗಮನಿಸಿತು.

- ಎಸ್‌ಎಲ್‌ಎನ್‌ಎ ಪುರಸಭೆಯ ಬಾಂಡ್‌ಗಳು, ಪೂಲ್ಡ್ ಹಣಕಾಸು ಕಾರ್ಯವಿಧಾನಗಳು, ತೆರಿಗೆ ಹೆಚ್ಚಳ ಹಣಕಾಸು, ಮೌಲ್ಯ ಗ್ರಹಿಕೆಯ ಹಣಕಾಸು ಇತ್ಯಾದಿ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ನವೀನ ಹಣಕಾಸು ಕಾರ್ಯವಿಧಾನಗಳ ಮೂಲಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಲಹೆಗಾರರ ಮೂಲಕ ನಗರಗಳ ಕ್ರೆಡಿಟ್ ರೇಟಿಂಗ್ ಮತ್ತು ಆರ್ಥಿಕ ಸುಧಾರಣಾ ಅಧ್ಯಯನಗಳನ್ನು ನಡೆಸಿತು. ಆದಾಗ್ಯೂ, ರಾಜ್ಯ ಸರ್ಕಾರವು ಅಸ್ತಿತ್ವದಲ್ಲಿರುವ ಕಾಯಿದೆಗಳು/ನಿಯಮಗಳಿಗೆ ಶಾಸಕಾಂಗ ತಿದ್ದುಪಡಿಗಳನ್ನು ಜಾರಿಗೆ ತಂದ ನಂತರ ಎಲ್ಲಾ ಯುಎಲ್‌ಬಿಗಳಲ್ಲಿ ಸಾರ್ವತ್ರಿಕ ಅಳವಡಿಕೆಗೆ ಅದರ ಸೂಕ್ತತೆಯ ಬಗ್ಗೆ ಇನ್ನೂ (ಜೂನ್ 2024) ನಿರ್ಧಾರ ತೆಗೆದುಕೊಳ್ಳದಿದ್ದುದರಿಂದ ಕಾರಣ ಸಲಹೆಗಾರರು ಸಲ್ಲಿಸಿ ಹಣಕಾಸು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಲಿಲ್ಲ. ಇದಲ್ಲದೆ ಈ ವಿಷಯದಲ್ಲಿ ಯಾವುದೇ ಪ್ರಗತಿಯಿರಲಿಲ್ಲ.

  ರಾಜ್ಯ ಸರ್ಕಾರವು (ಏಪ್ರಿಲ್ 2025) ಉತ್ತರಿಸುತ್ತಾ, ರಾಜ್ಯದ ಎಲ್ಲಾ ಯುಎಲ್‌ಬಿಗಳಲ್ಲಿ ಸಾರ್ವತ್ರಿಕ ಅಳವಡಿಕೆಗೆ ಸೂಕ್ತತೆಗಾಗಿ ಅಸ್ತಿತ್ವದಲ್ಲಿರುವ ನಿಯಮಗಳು/ಕಾಯಿದೆಗಳಿಗೆ ಶಾಸಕಾಂಗ ತಿದ್ದುಪಡಿಗಳನ್ನು ಮಾಡಿದ ನಂತರ ಅಥವಾ ಅಗತ್ಯವಿರುವಂತೆ ಅನ್ವಯವಾಗುವ ನಿಯಮಗಳು/ಕಾಯಿದೆಗಳಿಗೆ ಹೊಸ ಷರತ್ತುಗಳನ್ನು ಪರಿಚಯಿಸಿದ ನಂತರ ಕ್ರೆಡಿಟ್ ರೇಟಿಂಗ್ ಏಜೆನ್ಸಿ ಮಾಡಿದ ಶಿಫಾರಸುಗಳ ಕುರಿತು ನಗರಾಭಿವೃದ್ಧಿ ಇಲಾಖೆಯು ಚರ್ಚಿಸುತ್ತಿದೆ, ಎಂದು ಉತ್ತರಿಸಿತು.

- ಎಸ್‌ಪಿವಿಗಳು ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿ (ಎನ್‌ಐಐಎಫ್) ಮೂಲಕ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢಿಕರಿಸಲು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಪಡೆಯಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ.

  ಸ್ಮಾರ್ಟ್ ಸಿಟಿಗಳು ಎನ್‌ಐಐಎಫ್ ಅಡಿಯಲ್ಲಿ ನಿಧಿಗಳ ಕ್ರೋಢೀಕರಣವನ್ನು ಪ್ರಸ್ತಾಪಿಸಿಲ್ಲ ಮತ್ತು ಭವಿಷ್ಯದ ಯೋಜನೆಗಳಲ್ಲಿ ಇದನ್ನು ಜಾರಿಗೆ ತರಲಾಗುವುದು ಎಂದು ರಾಜ್ಯ ಸರ್ಕಾರವು ಒಪ್ಪಿಕೊಂಡಿತು.

- ಏಳು ಎಸ್‌ಸಿಪಿಗಳ ಪಿಪಿಪಿ ಮಾದರಿಗಳಿಗೆ ಸಂಬಂಧಿಸಿದಂತೆ ₹2,907.38 ಕೋಟಿ ವೆಚ್ಚವನ್ನು ಸಂಪೂರ್ಣವಾಗಿ ಯೋಜಿಸಿದಂತೆ ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ. 31 ಪಿಪಿಪಿ ಯೋಜನೆಗಳು ಆರ್ಥಿಕವಾಗಿ ಲಾಭದಾಯಕವಲ್ಲದ ಕಾರಣ ಕೈಬಿಡಲಾಯಿತು. ಪಿಪಿಪಿ ಮಾದರಿಯಡಿಯಲ್ಲಿ ಜಾರಿಗೆ ತರಲಾದ 26 ಯೋಜನೆಗಳಲ್ಲಿ (**ಅನುಬಂಧ–3.1**), ಕೇವಲ 13 ಯೋಜನೆಗಳು ಪೂರ್ಣಗೊಂಡಿವೆ.

  ರಾಜ್ಯ ಸರ್ಕಾರವು ನೀಡಿದ ಉತ್ತರದಲ್ಲಿ ಸ್ಮಾರ್ಟ್ ನಗರಗಳ ಅಡಿಯಲ್ಲಿ ₹1,091.05 ಕೋಟಿ ಮೊತ್ತದ 26 ಪಿಪಿಪಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿತು (ಏಪ್ರಿಲ್ 2025).

ಇದರಲ್ಲಿ ₹329.68 ಕೋಟಿಯ 13 ಯೋಜನೆಗಳು ಪೂರ್ಣಗೊಂಡಿದ್ದು, ₹761.37 ಕೋಟಿಯ 13 ಯೋಜನೆಗಳು ಪ್ರಗತಿಯಲ್ಲಿವೆ ಎಂದು ತಿಳಿಸಿತು.

- ಎಸ್‌ಸಿಪಿಗಳ ಆದಾಯ ಉತ್ಪಾದನೆಯ ಯೋಜನೆಗಳಿಂದ[18] 5 ರಿಂದ 30 ವರ್ಷಗಳ ಅವಧಿಯಲ್ಲಿ ₹7,409.12 ಕೋಟಿ ಮೊತ್ತವನ್ನು ಸಂಗ್ರಹಿಸಬಹುದೆಂದು ಅಂದಾಜಿಸಲಾಗಿತ್ತು. ಅಂತಹ ಆದಾಯವನ್ನು ಎಸ್‌ಪಿವಿಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಪೂರೈಸಲು ಬಳಸಬೇಕಿತ್ತು. ಆದರೆ, ಎಸ್‌ಪಿವಿಗಳು ಒಟ್ಟು 645 ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಕೇವಲ 53 (ಶೇಕಡಾ 8) ಯೋಜನೆಗಳನ್ನು ಮಾತ್ರ ಆದಾಯ ಉತ್ಪಾದನಾ ಮಾದರಿಯಲ್ಲಿ ಕೈಗೊಂಡಿದ್ದವು. ಇದಲ್ಲದೆ, ಈ 53 ಯೋಜನೆಗಳಿಗೆ ಸಂಬಂಧಿಸಿದ ಆದಾಯವು ಆಸ್ತಿ ನಿರ್ವಹಣೆ ಮತ್ತು ಕಾರ್ಯಾಚರಣೆಗಾಗಿ ಸ್ಥಾಪಿಸಲಾದ ಸಂಬಂಧಿತ ನಿಗಮಗಳು ಅಥವಾ ಟ್ರಸ್ಟ್‌ಗಳಿಗೆ ಹರಿಯುತ್ತಿತ್ತು.

  ರಾಜ್ಯ ಸರ್ಕಾರವು (ಏಪ್ರಿಲ್ 2025) ಪ್ರಸ್ತುತ ಏಳು ನಗರಗಳು ಆದಾಯ ಉತ್ಪಾದನಾ ವಿಭಾಗದ ಅಡಿಯಲ್ಲಿ 130 ಯೋಜನೆಗಳನ್ನು ಕೈಗೆತ್ತಿಕೊಂಡಿವೆ ಎಂದು ಉತ್ತರಿಸಿತು. ಇದಲ್ಲದೆ, ನಗರದ ಪ್ರಮುಖ ಮೂಲಸೌಕರ್ಯಗಳಾದ ರಸ್ತೆಗಳು, ಒಳಚರಂಡಿಗಳು, ಪಾದಚಾರಿ ಮಾರ್ಗಗಳು, ಘನ ತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯೂಎಂ) ಉದ್ಯಾನವನಗಳು, ನೀರು ಸರಬರಾಜು, ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳು ಮುಂತಾದ, ಅಗತ್ಯವಾದ ನಗರ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ಈ ಮೂಲಭೂತ ಮೂಲಸೌಕರ್ಯಕ್ಕಾಗಿ ಆದಾಯ ಮಾದರಿಯನ್ನು ನಿರ್ಮಿಸುವುದು ಯಾವಾಗಲೂ ಸಾಧ್ಯವಿಲ್ಲ. ಆದಾಗ್ಯೂ, ಗ್ರಂಥಾಲಯಗಳಿಗೆ ಚಂದಾದಾರಿಕೆ ಮಾದರಿ, ಸಾರ್ವಜನಿಕ ಬೈಸಿಕಲ್ ಹಂಚಿಕೆ (ಪಿಬಿಎಸ್), ಉದ್ಯಾನವನಗಳಿಗೆ ಪ್ರವೇಶ ಶುಲ್ಕ, ಡಿಜಿಟಲ್ ಪ್ರದರ್ಶನ ಫಲಕಗಳ ಮೂಲಕ ಜಾಹೀರಾತು ತೆರಿಗೆಯನ್ನು ಸಂಗ್ರಹಿಸುವುದು, ಪಾರ್ಕಿಂಗ್ ಶುಲ್ಕಗಳು, ಬಹುಪಯೋಗಿ ಸಹಾಯ ಕೇಂದ್ರಗಳು (ಎಂಯುಎಫ್‌ಸಿ) /ಮಾರುಕಟ್ಟೆಗಳು, ಒಎಫ್‌ಸಿ ಕೊಳವೆಗಳು ಇತ್ಯಾದಿ ಯೋಜನೆಗಳಲ್ಲಿ ಆದಾಯ ಉತ್ಪಾದನೆಯ ಮೂಲಕ ಯೋಜನೆಗಳ ಸ್ವಯಂ-ಸುಸ್ಥಿರತೆಯನ್ನು ಉತ್ತೇಜಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

  ಈ ಉತ್ತರವು ಎಸ್‌ಸಿಪಿಗಳ ಮೇಲಿನ ಯೋಜನೆಗಳನ್ನು ಯಶಸ್ವಿಯಾಗಿ ಆದಾಯ ಉತ್ಪಾದಿಸುವ ಮಾದರಿಗಳಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ ಎಂಬ ಅಂಶವನ್ನು ದೃಢಪಡಿಸುತ್ತದೆ.

- ಎಸ್‌ಸಿಪಿಗಳಲ್ಲಿ ವಿವಿಧ ಕೇಂದ್ರ ಮತ್ತು ರಾಜ್ಯ ಯೋಜನೆಗಳ ಸಂಯೋಜನೆಯ ಮೂಲಕ ₹5,008.00 ಕೋಟಿ ಮೊತ್ತವನ್ನು ಸಂಗ್ರಹಿಸುವಂತಾಗಿ ನಿಗದಿಪಡಿಸಲಾಗಿತ್ತು. ಆದರೆ ಸಂಯೋಜನಾ ವಿಧಾನದಲ್ಲಿ ಕೈಗೊಳ್ಳಲಾದ 237 ಯೋಜನೆಗಳಲ್ಲಿ 226 ಯೋಜನೆಗಳಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸು ಸಂಯೋಜನೆ (ಹಣದ ಒಳಹರಿವು/ಹೊರಹರಿವು) ನಡೆದಿರಲಿಲ್ಲ. ಈ ಯೋಜನೆಗಳ ಅನುಷ್ಠಾನ ಅಥವಾ ಮೇಲ್ವಿಚಾರಣೆಯಲ್ಲಿ ಎಸ್‌ಪಿವಿಗಳಿಗೆ ಯಾವುದೇ ಪಾತ್ರ ಇರಲಿಲ್ಲ ಮತ್ತು ಈ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳು ಅವರ ವಶದಲ್ಲಿರಲಿಲ್ಲ. ಇದು ಅನುಮೋದಿತ ಎಸ್‌ಸಿಪಿ ಮತ್ತು ಮಿಷನ್ ಮಾರ್ಗಸೂಚಿಗಳ ಉಲ್ಲಂಘನೆಯಾಗಿದ್ದು, ಇತರ ಮಿಷನ್‌ಗಳು/ಯೋಜನೆಗಳೊಂದಿಗೆ ಸಂಯೋಜನೆಯ ಕಾರ್ಯವನ್ನು ಎಸ್‌ಪಿವಿಗಳ ಪ್ರಮುಖ ಹೊಣೆಗಾರಿಕೆಗಳಲ್ಲಿ ಒಂದಾಗಿ ನಿರ್ಧರಿಸಲಾಗಿತ್ತು.

  ರಾಜ್ಯ ಸರ್ಕಾರವು ನೀಡಿದ ಉತ್ತರದಲ್ಲಿ ಏಳು ನಗರಗಳು ಒಟ್ಟಾಗಿ ₹6,814.10 ಕೋಟಿಯ 251 ಕಾಮಗಾರಿಗಳನ್ನು ಸಂಯೋಜನಾ ವಿಧಾನದಲ್ಲಿ ಕೈಗೊಂಡಿದ್ದು, ಅದರಲ್ಲಿ ₹3,822.49 ಕೋಟಿಯ 232 ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ₹2,991.61 ಕೋಟಿಯ 19 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿತು (ಏಪ್ರಿಲ್ 2025).

---

18 ಅಭಿವೃದ್ಧಿ ಶುಲ್ಕಗಳು, ಪ್ರವೇಶ ಶುಲ್ಕಗಳು, ಗುತ್ತಿಗೆ ಬಾಡಿಗೆಗಳು, ನೈರ್ಮಲ್ಯ ಶುಲ್ಕಗಳು, ಸ್ಮಾರ್ಟ್ ಮೀಟರಿಂಗ್ ಶುಲ್ಕಗಳು ಇತ್ಯಾದಿಗಳ ರೂಪಗಳಲ್ಲಿ.

***ಶಿಫಾರಸು 1: ಸ್ಮಾರ್ಟ್ ನಗರಗಳು ಕೈಗೊಂಡಿರುವ ಯೋಜನೆಗಳ ದೀರ್ಘಕಾಲೀನ ಸ್ಥಿರತೆಯನ್ನು ಖಚಿತಪಡಿಸಲು ಸರ್ಕಾರದ ಅನುದಾನಗಳ ಹೊರತಾಗಿ ಇತರೆ ಸಂಪನ್ಮೂಲಗಳನ್ನು ಅನ್ವೇಷಿಸಬೇಕಿದೆ.***

### 3.3 ಕೇಂದ್ರ ಪುರಸ್ಕೃತ ಯೋಜನೆ (ಸಿಎಸ್‌ಎಸ್) ಅನುದಾನದಿಂದ ಗಳಿಸಿದ ₹2.69 ಕೋಟಿಯ ಬಡ್ಡಿ ಮೊತ್ತವನ್ನು ಜಮಾ ಮಾಡದಿರುವುದು

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ(ಕೆಯುಐಡಿಎಫ್‌ಸಿ) (ಎಸ್‌ಎಲ್‌ಎನ್‌ಎ)ಯು 'ಸ್ಮಾರ್ಟ್ ಸಿಟಿ ಮಿಷನ್'ಗೆ ಸಂಬಂಧಿಸಿದ ವ್ಯವಹಾರಗಳಿಗಾಗಿ ಭಾರತ ಸರ್ಕಾರ ಬಿಡುಗಡೆ ಮಾಡಿದ ನಿಧಿಗಳು ಪ್ರತ್ಯೇಕವಾಗಿ ಒಂದು ಖಾತೆಯ ನಿರ್ವಹಣೆಗಾಗಿ ಕಾರ್ಯನಿರ್ವಹಿಸುತ್ತದೆ. ಇದಲ್ಲದೆ, ಎಸ್‌ಪಿವಿಗಳಿಗೆ ಮತ್ತು ಅನುಷ್ಠಾನ ಸಂಸ್ಥೆಗಳಿಗೆ ಹಣವನ್ನು ಈ ಖಾತೆಯಿಂದ ಬಿಡುಗಡೆ ಮಾಡಲಾಗಿತ್ತು.

ಸಾಮಾನ್ಯ ಹಣಕಾಸು ನಿಯಮಗಳು (ಜಿಎಫ್‌ಆರ್)–2017ರ ನಿಯಮ 230 (8)ರ ಪ್ರಕಾರ, ಯಾವುದೇ ಅನುದಾನ ಪಡೆಯುವ ಸಂಸ್ಥೆಗೆ ಬಿಡುಗಡೆಯಾದ ಸಹಾಯಾನುದಾನ ಅಥವಾ ಮುಂಗಡಗಳ (ಮರುಪಾವತಿ ಹೊರತುಪಡಿಸಿ) ಅನುದಾದಿಂದ ಉತ್ಪತ್ತಿಯಾದ ಎಲ್ಲಾ ಬಡ್ಡಿಗಳು ಅಥವಾ ಇತರ ಗಳಿಕೆಗಳನ್ನು ಲೆಕ್ಕಗಳನ್ನು ಅಂತಿಮಗೊಳಿಸಿದ ತಕ್ಷಣ ಭಾರತದ ಸಂಚಿತ ನಿಧಿಗೆ ಕಡ್ಡಾಯವಾಗಿ ಜಮಾ ಮಾಡಬೇಕು. ಆರ್ಥಿಕ ಸಚಿವಾಲಯ (ವೆಚ್ಚ ಇಲಾಖೆ) ಭಾರತ ಸರ್ಕಾರವು ಹೊರಡಿಸಿದ 30 ಜೂನ್ 2021ರ ಕಚೇರಿ ಜ್ಞಾಪನದ ಪ್ರಕಾರ, ರಾಜ್ಯದ ಪ್ರತಿಯೊಂದು ಸಿಎಸ್‌ಎಸ್‌ನ ರಾಜ್ಯ ನೋಡಲ್ ಏಜೆನ್ಸಿ/ಪ್ರತ್ಯೇಕ ನೋಡಲ್ ಏಜೆನ್ಸಿಯು (ಎಸ್‌ಎನ್‌ಎ), ಹಿಂದಿನ ಹಣಕಾಸು ವರ್ಷದಲ್ಲಿ (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡರಿಂದಲೂ) ತನ್ನ ಖಾತೆಯಲ್ಲಿ ಪಡೆದ ನಿಧಿಯಿಂದ ಗಳಿಸಿದ ಒಟ್ಟು ಬಡ್ಡಿಯನ್ನು ಪ್ರತಿ ವರ್ಷ ಏಪ್ರಿಲ್ ಮೊದಲನೇ ವಾರದಲ್ಲಿ ಲೆಕ್ಕಾಚಾರ ಮಾಡಬೇಕು. ಗಳಿಸಿದ ಬಡ್ಡಿಯನ್ನು ಎಸ್‌ಎನ್‌ಎ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ಸಿಎಸ್‌ಎಸ್‌ನ ಅನುಮೋದಿತ ನಿಧಿ ಮಾದರಿಯ ಪ್ರಕಾರ ಹಂಚುತ್ತದೆ ಮತ್ತು ಆಯಾ ಸಂಚಿತ ನಿಧಿಗೆ ಜಮೆ ಮಾಡಲಾಗುತ್ತದೆ.

ದಾಖಲೆಗಳ ಪರಿಶೀಲನೆಯಿಂದ 2015–16ರಿಂದ ಜೂನ್ 2024ರವರೆಗೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳಿಂದ ಪಡೆದ ಅನುದಾನವನ್ನು ಕಾಲಾನುಗತವಾಗಿ ಫ್ಲೆಕ್ಸಿ ಠೇವಣಿಗಳಲ್ಲಿ ಇಡಲಾಗಿದ್ದು, ಅದರಿಂದ ಗಳಿಸಿದ ₹2.69 ಕೋಟಿಯ ಬಡ್ಡಿಯನ್ನು ಸಂಬಂಧಿತ ಸಂಚಿತ ನಿಧಿಗಳಿಗೆ ಜಮಾ ಮಾಡಲಾಗಿಲ್ಲ. ಎಸ್‌ಎಲ್‌ಎನ್‌ಎಗೆ ಬಿಡುಗಡೆಗೊಳಿಸಲಾದ ನಿಧಿಯ ಉದ್ದೇಶವು ಬಡ್ಡಿ ಗಳಿಸುವುದಕ್ಕಿಂತ ಯೋಜನೆಯ ಅನುಷ್ಠಾನಕ್ಕಾಗಿ, ಎಸ್‌ಪಿವಿಗಳಿಗೆ ಮುಂದಿನ ಹಂತದಲ್ಲಿ ವರ್ಗಾಯಿಸುವುದೇ ಆಗಿತ್ತು.

ರಾಜ್ಯ ಸರ್ಕಾರವು ಗಳಿಸಿದ ಬಡ್ಡಿಯನ್ನು ಪ್ರೋ–ರೇಟಾ ಆಧಾರದ ಮೇಲೆ ಸಂಬಂಧಿತ ಖಾತೆಗಳಿಗೆ ಜಮಾ ಮಾಡುವುದಾಗಿ ತಿಳಿಸಿತು (ಏಪ್ರಿಲ್ 2025).

### 3.4 ಸಂಕಲ್ಪಿತ ಉದ್ದೇಶವನ್ನು ಮೀರಿ ಎಸ್‌ಸಿಎಂ ನಿಧಿಗಳ ಅನುಚಿತ ಬಳಕೆ

ಕೆಯುಐಡಿಎಫ್‌ಸಿಯು ಏಪ್ರಿಲ್ 2023 ರಿಂದ ಜೂನ್ 2024ರ ಅವಧಿಯಲ್ಲಿ ಖರ್ಚು ಮಾಡಿದ ₹0.75 ಕೋಟಿಯ ವೆಚ್ಚದ ದಾಖಲೆಗಳ ಪರಿಶೀಲನೆಯಿಂದ ಸದರಿ ವೆಚ್ಚವು ಸ್ಮಾರ್ಟ್ ಸಿಟಿ ಯೋಜನೆ/ಕೋಶಕ್ಕೆ ಸಂಬಂಧಿಸದ ಆಡಳಿತ ಮತ್ತು ಕಾರ್ಯಾಚರಣಾ ವೆಚ್ಚವಾಗಿದೆ (ಎ ಮತ್ತು ಒಇ) ಎಂದು ಕೆಳಗಿನಂತೆ ತಿಳಿದುಬಂದಿದೆ.

1. ₹0.25 ಕೋಟಿಯ ಮೊತ್ತವನ್ನು (ನವೆಂಬರ್ 2023) ನಗರ ವ್ಯವಸ್ಥಾಪಕರ ಸಂಘ, ಕರ್ನಾಟಕ ಅವರಿಗೆ ಪುರಸಭೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಪಾವತಿಸಲಾಗಿತ್ತು. ಈ ಬೇಡಿಕೆಯನ್ನು ನಗರಾಭಿವೃದ್ಧಿ ಇಲಾಖೆ (ಯುಡಿಡಿ) ವತಿಯಿಂದ ಮಾಡಲಾಗಿದ್ದರೂ, ಇಂತಹ ಕಾರ್ಯಕ್ರಮಗಳಿಗೆ ಎಸ್‌ಸಿಎಂ ನಿಧಿಯ ಬಳಕೆಯನ್ನು ಮಾರ್ಗಸೂಚಿಗಳು ಒಳಗೊಂಡಿರಲಿಲ್ಲ.

2. ₹0.48 ಕೋಟಿಯ ವೆಚ್ಚವನ್ನು (ಆಫೀಸ್ ನಿರ್ವಹಣೆಗೆ ₹0.27 ಕೋಟಿ ಮತ್ತು ಭದ್ರತಾ ಶುಲ್ಕಕ್ಕೆ ₹0.21 ಕೋಟಿ) ಎಸ್‌ಸಿಎಂ ನಿಧಿಯಿಂದ ಭರಿಸಲಾಯಿತು. ಈ ವೆಚ್ಚವು ಸಂಪೂರ್ಣ ಕೆಯುಐಡಿಎಫ್‌ಸಿ ಕಚೇರಿಯ ನಿರ್ವಹಣೆ ಮತ್ತು ಭದ್ರತೆಗೆ ಸಂಬಂಧಿಸಿದ್ದು, ಸಮರ್ಪಕವಾದ ನ್ಯಾಯ ಸಂಗತತೆಯಿಲ್ಲದೆ ಎಸ್‌ಸಿಎಂನಿಧಿಯಿಂದ ಪಾವತಿಸಲಾಗಿತ್ತು.

3. ಪರಿಸರ ನಿರ್ವಹಣೆ ಮತ್ತು ಹವಾಮಾನ ಬದಲಾವಣೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನಕ್ಕಾಗಿ ಇನ್‌ಸ್ಟಿಟ್ಯೂಟ್ ಆಫ್ ಡೈರೆಕ್ಟರ್ಸ್ (ಐಒಡಿ) ₹0.02 ಕೋಟಿಯ ಮೊತ್ತವನ್ನು ವಿನಂತಿಸಿತ್ತು. ಈ ಮೊತ್ತವನ್ನು ಕೆಯುಐಡಿಎಫ್‌ಸಿಯವರು 14 ಜೂನ್ 2024ರಂದು ಎಸ್‌ಸಿಎಂ ನಿಧಿಯಿಂದ ಪಾವತಿಸಿದ್ದರು.

ರಾಜ್ಯ ಸರ್ಕಾರವು ಈ ಹಣವನ್ನು ಸಾಮರ್ಥ್ಯ ವೃದ್ಧಿ ಚಟುವಟಿಕೆಗಳಿಗೆ ಮತ್ತು ಸ್ಮಾರ್ಟ್ ಸಿಟಿಗಳಿಗೆ ಉತ್ತಮ ತಂತ್ರಜ್ಞಾನಗಳನ್ನು ತರಲು ಬಳಸಲಾಗಿದೆ ಎಂದು ಹೇಳಿತು (ಏಪ್ರಿಲ್ 2025). ಆದಾಗ್ಯೂ, ಮೇಲಿನ ಎಸ್‌ಸಿಎಂ ವ್ಯಾಪ್ತಿಯಲ್ಲಿ ಇಲ್ಲದ ವಸ್ತುಗಳಿಗೆ ಮಾಡಿದ ವೆಚ್ಚವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

## 3.5 ಹಣಕಾಸು ನಿರ್ವಹಣೆಯಲ್ಲಿನ ಇತರ ಕೊರತೆಗಳು

### *3.5.1 ಯೋಜನಾ ನಿರ್ವಹಣಾ ಸಲಹೆಗಾರರಿಗೆ ಅಧಿಕ ಪಾವತಿ*

ಮೈಸೂರು ಸ್ಮಾರ್ಟ್ ಸಿಟಿ ಲಿಮಿಟೆಡ್ (ಎಂಎಸ್‌ಸಿಎಲ್) ಸಂಸ್ಥೆಯು ಮಿಷನ್‌ನ ಅನುಷ್ಠಾನಕ್ಕಾಗಿ ಏಪ್ರಿಲ್ 2017ರಲ್ಲಿ ಎಂ/ಎಸ್ ವಾಡಿಯಾ ಟೆಕ್ನೋ–ಎಂಜಿನಿಯರಿಂಗ್ ಸರ್ವೀಸಸ್ ಲಿಮಿಟೆಡ್, ಎಂ/ಎಸ್ ಲೂಯಿಸ್ ಬರ್ಜರ್ ಕನ್ಸಲ್ಟಿಂಗ್ ಪ್ರೈ.ಲಿ ಹಾಗೂ ಸಿ–ಡ್ಯಾಕ್ ಸಂಸ್ಥೆಗಳ ಸಂಯುಕ್ತ ಘಟಕವನ್ನು ಯೋಜನಾ ನಿರ್ವಹಣಾ ಸಲಹೆಗಾರರಾಗಿ (ಪಿಎಂಸಿ) ನೇಮಕ ಮಾಡಿತು. ಯೋಜನಾ ನಿರ್ವಹಣಾ ಸಲಹೆಗಾರರು ಒಪ್ಪಂದದ ಬಾಧ್ಯತೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲವಾದ ಹಿನ್ನೆಲೆಯಲ್ಲಿ, ಎಂಎಸ್‌ಸಿಎಲ್‌ರಿಂದ ಸಂಸ್ಥೆಯು ನವೆಂಬರ್ 2020ರಲ್ಲಿ ಒಪ್ಪಂದವನ್ನು ರದ್ದುಪಡಿಸಲು ನೋಟಿಸ್ ನೀಡಿತು. ಇದರ ಪ್ರತಿಯಾಗಿ, ಪಿಎಂಸಿ ಸಂಸ್ಥೆಯು ಡಿಸೆಂಬರ್ 2020ರಲ್ಲಿ ಎಂಎಸ್‌ಸಿಎಲ್ ನಾಮನಿರ್ದೇಶಿತ ಸಂಸ್ಥೆಗಳಿಗೆ ತಮ್ಮ ವ್ಯಾಪ್ತಿಯ ಯೋಜನೆಗಳನ್ನು ಹಸ್ತಾಂತರಿಸಲು ಸಮ್ಮತಿಸಿತು. ಬಾಕಿ ಪಾವತಿಯ ಭಾಗವಾಗಿ, ಪಿಎಂಸಿ ಸಂಸ್ಥೆಯು ₹7.19 ಕೋಟಿ ಮೊತ್ತದ ಹಕ್ಕುಪತ್ರವನ್ನು ಸಲ್ಲಿಸಿತು, ಇದರಲ್ಲಿ ಎಂಎಸ್‌ಸಿಎಲ್ ಸಂಸ್ಥೆಯು ಈಗಾಗಲೇ ₹3.95 ಕೋಟಿ ಪಾವತಿಸಿತ್ತು. ಉಳಿದ ₹3.44 ಕೋಟಿ ಮೊತ್ತವನ್ನು, ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಹಕ್ಕುಪತ್ರಗಳ ಪರಿಶೀಲನೆ ಬಳಿಕ, ಎಂಎಸ್‌ಸಿಎಲ್ ಸಂಸ್ಥೆಯು ಜನವರಿ 2022ರಲ್ಲಿ ಪಾವತಿಸಿದೆ.

ಚಾರ್ಟರ್ಡ್ ಅಕೌಂಟೆಂಟ್ ವರದಿ ಮತ್ತು ಪಿಎಂಸಿಗೆ ಮಾಡಿದ ಪಾವತಿಗಳನ್ನು ಪರಿಶೀಲಿಸಿದಾಗ, ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಗಮನಿಸಿತು:

- ವಿನ್ಯಾಸ ಹಂತವನ್ನು ಮಾತ್ರ ಪೂರ್ಣಗೊಳಿಸಿದ ಎರಡು ಯೋಜನೆಗಳಿಗೆ ₹1.13 ಕೋಟಿ ಹೆಚ್ಚುವರಿ ಪಾವತಿ ಮಾಡಲಾಗಿತ್ತು.[19] ಸಿಎ ವರದಿಯ ಪ್ರಕಾರ, ಯೋಜನೆಗಳನ್ನು ಪೂರ್ಣಗೊಂಡಿದೆ ಎಂದು ಪರಿಗಣಿಸಲಾಗಿತ್ತು ಮತ್ತು ಪೂರ್ಣ ಪಾವತಿಗಳನ್ನು ಅನಿಯಮಿತವಾಗಿ ಮಾಡಲಾಗಿತ್ತು.
- ಅದೇ ರೀತಿ ವಿನ್ಯಾಸ ಹಂತವು ಅಪೂರ್ಣವಾಗಿದ್ದ ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ ₹0.71 ಕೋಟಿ ಹೆಚ್ಚುವರಿ ಪಾವತಿ ಮಾಡಲಾಗಿತ್ತು.[20]
- ಎಂಎಸ್‌ಸಿಎಲ್ ಸಂಸ್ಥೆಯು ಜಲತಟ ಅಭಿವೃದ್ಧಿ ಹಾಗೂ ಸ್ಮಾರ್ಟ್ ರಸ್ತೆ ಯೋಜನೆಗಳ ಜಾರಿಗೆ ಇಬ್ಬರು ಹೊಸ ಪಿಎಂಸಿಗಳನ್ನು ನೇಮಿಸಿತು ಮತ್ತು ಈ ಕಾಮಗಾರಿಗಳ ವಿನ್ಯಾಸ ಹಂತದ ಕಾರ್ಯಗಳಿಗೆ

[19] ಹಂಪನಕಟ್ಟಾ ಜಂಕ್ಷನ್ ಬಳಿ ಚಿಲ್ಲರೆ ಮಾರಾಟ ಸ್ಥಳದೊಂದಿಗೆ ಬಹುಮಟ್ಟದ ಕಾರು ನಿಲುಗಡೆ (ಎಂಎಲ್‌ಸಿಪಿ) ಅಭಿವೃದ್ಧಿ, ಮತ್ತು ಎಲ್ಲಾ ಬೀದಿ ದೀಪಗಳನ್ನು ಸೌರ ಎಲ್‌ಇಡಿ ಆಗಿ ಪರಿವರ್ತಿಸುವುದು.

[20] ಕೇಂದ್ರ ಮಾರುಕಟ್ಟೆಯ ಪುನರಾಭಿವೃದ್ಧಿ ಮತ್ತು ಮೀನು ಮಾರುಕಟ್ಟೆಯ ನವೀಕರಣ ಮತ್ತು ಕರಾವಳಿ ಪ್ರದೇಶ ಅಭಿವೃದ್ಧಿ.

₹0.72 ಕೋಟಿ ಮೊತ್ತವನ್ನು ಪಾವತಿಸಿತು. ಆದರೆ, ಹಿಂದಿನ ಪಿಎಂಸಿಗಳಿಗೆ ಇದೇ ವಿನ್ಯಾಸ ಹಂತದ ಕಾರ್ಯಗಳಿಗಾಗಿ ಈಗಾಗಲೇ ಹಣ ಪಾವತಿಯಾಗಿದ್ದರಿಂದ, ಈ ಪಾವತಿಯು ದ್ವಿಪ್ರತಿ ಸ್ವರೂಪದ್ದಾಗಿದೆ.

ಹೀಗಾಗಿ, ಪಿಎಂಸಿಗೆ ಮಾಡಿದ ಪಾವತಿಗಳಿಗೆ ಸಂಬಂಧಿಸಿದಂತೆ ಅಸಮರ್ಪಕ ಪರಿಶೀಲನೆಯು ₹2.56 ಕೋಟಿ ಹೆಚ್ಚುವರಿ ಪಾವತಿಗೆ ಕಾರಣವಾಯಿತು.

ರಾಜ್ಯ ಸರ್ಕಾರವು ಪಿಎಂಸಿಗೆ ಒಟ್ಟು ಪಾವತಿಯು ನಿಜವಾದ ನಿಯೋಜನೆಯ ಅವಧಿಗೆ ನಿಯೋಜಿಸಲಾದ ಸಿಬ್ಬಂದಿ ಮತ್ತು ನಿಯೋಜನೆಯ ಸಮಯದಲ್ಲಿ ನಿರ್ವಹಿಸಲಾದ ಕೆಲಸದ ಒಟ್ಟು ಮೌಲ್ಯವನ್ನು ಆಧರಿಸಿದೆ ಮತ್ತು ನಿಜವಾದ ಅನುಷ್ಠಾನ ಅಥವಾ ವಿನ್ಯಾಸ ಹಂತದ ವರದಿಗಳ ಸಲ್ಲಿಕೆಯ ಸಮಯದಲ್ಲಿ ಪಿಎಂಸಿಯ ಉಪಸ್ಥಿತಿಯನ್ನು ಅವಲಂಬಿಸಿಲ್ಲ ಎಂದು ಉತ್ತರಿಸಿತು (ಏಪ್ರಿಲ್ 2025). ಒಪ್ಪಂದದಲ್ಲಿ ಸೂಚಿಸಲಾದ ಮೈಲಿಗಲ್ಲುಗಳ ಸಾಧನೆಯ ಆಧಾರದ ಮೇಲೆ ಪಿಎಂಸಿಗೆ ಪಾವತಿಯನ್ನು ನಿಯಂತ್ರಿಸಬೇಕಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

### *3.5.2 ಇಲಾಖೆಗಳಿಗೆ ನೇರವಾಗಿ ನಿಧಿಗಳ ಅಸಮರ್ಪಕ ವರ್ಗಾವಣೆ*

ವಸತಿ ಮತ್ತು ನಗರ ಕಾರ್ಯಗಳ ಮಂತ್ರಾಲಯ ಜನವರಿ 2019ರಲ್ಲಿ ನೀಡಿದ ಸೂಚನೆಯ ಪ್ರಕಾರ, ತಾಂತ್ರಿಕ ಪರಿಣತಿ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯ ಹೊಂದಿರುವ ಇಲಾಖೆಗಳು ಅಥವಾ ಸರ್ಕಾರದ ಸಂಸ್ಥೆಗಳನ್ನು, ಸಂಬಂಧಿತ ಯೋಜನೆಗಳನ್ನು ವೇಗವಾಗಿ ಜಾರಿಗೊಳಿಸಲು ಬಳಸಿಕೊಳ್ಳಬಹುದಾಗಿದೆ ಎಂದು ತಿಳಿಸಿತು. ಆದಾಗ್ಯೂ, ವಸತಿ ಮತ್ತು ನಗರ ಕಾರ್ಯಗಳ ಮಂತ್ರಾಲಯ ಸಂಸ್ಥೆಯು ಎಸ್‌ಪಿವಿ ಸರ್ಕಾರದ ಇಲಾಖೆ/ಸಂಸ್ಥೆಗಳಿಗೆ ನಿಧಿಗಳನ್ನು ನೇರವಾಗಿ ವರ್ಗಾಯಿಸುವಂತಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಿತ್ತು. ಟೆಂಡರ್‌ನ ನಿಯಮದ ಪ್ರಕಾರ, ಪ್ರತಿ ಮೈಲಿಗಲ್ಲು ಪೂರ್ಣಗೊಂಡ ನಂತರ, ಪಾವತಿಗಳನ್ನು ಎಸ್‌ಪಿವಿ ಸಂಸ್ಥೆಯು ನೇರವಾಗಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಲಾಯಿತು. ಸರ್ಕಾರದ ಇಲಾಖೆ/ಸಂಸ್ಥೆಯು ಗುತ್ತಿಗೆದಾರರಿಂದ ಸಲ್ಲಿಸಲಾದ ಬಿಲ್‌ಗಳನ್ನು ಪರಿಶೀಲಿಸಿ ದೃಢಪಡಿಸಿ, ಪಾವತಿಗಾಗಿ ಎಸ್‌ಪಿವಿಗೆ ಸಲ್ಲಿಸಬೇಕಾಗಿತ್ತು. ಇಂತಹ ಯೋಜನೆಗಳ ಜಾರಿಗೆ ಮೊದಲು, ಎಸ್‌ಪಿವಿ, ಸರ್ಕಾರದ ಇಲಾಖೆ/ಸಂಸ್ಥೆ, ಮತ್ತು ಸಂಭಾವ್ಯ ಗುತ್ತಿಗೆದಾರ ಇವರ ನಡುವೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡಿರಬೇಕೆಂದು ವಸತಿ ಮತ್ತು ನಗರ ಕಾರ್ಯಗಳ ಮಂತ್ರಾಲಯವು ಸೂಚಿಸಿತ್ತು.

**ಕೋಷ್ಟಕ–3.3**ರಲ್ಲಿ ವಿವರಿಸಿದಂತೆ ವಸತಿ ಮತ್ತು ನಗರ ಕಾರ್ಯಗಳ ಮಂತ್ರಾಲಯದ ಸೂಚನೆಗಳನ್ನು ಉಲ್ಲಂಘಿಸಿ ಇಲಾಖೆಗಳು/ಏಜೆನ್ಸಿಗಳಿಗೆ ₹153.38 ಕೋಟಿ ಮೊತ್ತವನ್ನು ವರ್ಗಾಯಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–3.3: ಜೂನ್ 2024ರ ಹೊತ್ತಿಗೆ ಎಸ್‌ಪಿವಿಗಳು ನೇರವಾಗಿ ಸರ್ಕಾರಿ ಇಲಾಖೆಗಳು/ಏಜೆನ್ಸಿಗಳಿಗೆ ಬಿಡುಗಡೆ ಮಾಡಿದ ಮೊತ್ತ**

| ಕ್ರಮ ಸಂಖ್ಯೆ | ಸ್ಮಾರ್ಟ್ ಸಿಟಿ | ವರ್ಗಾಯಿಸಲಾದ ಮೊತ್ತ (₹ ಕೋಟಿಗಳಲ್ಲಿ) | ಸರ್ಕಾರಿ ಇಲಾಖೆ/ಸಂಸ್ಥೆ | ಉದ್ದೇಶ | ವರ್ಗಾವಣೆ ದಿನಾಂಕ | ಪ್ರಸ್ತುತ ಸ್ಥಿತಿ |
|---|---|---|---|---|---|---|
| 1 | ತುಮಕೂರು | 20.71 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | ಜಿಲ್ಲಾ ಆಸ್ಪತ್ರೆಯಲ್ಲಿ ಆಘಾತ ಚಿಕಿತ್ಸಾ ಕೇಂದ್ರ ನಿರ್ಮಾಣ | 16.08.2019 | ನಿಧಿಗಳನ್ನು ಎರಡು ವರ್ಷದ ಅಂತರದ ನಂತರ ಡಿಸೆಂಬರ್ 2021ರಲ್ಲಿ ಬಳಸಿಕೊಳ್ಳಲಾಯಿತು. |
| 2 | | 14.46 | ಕೆಯುಡಬ್ಲ್ಯೂಎಸ್‌ಡಿಬಿ | ನೀರು ಸರಬರಾಜು ಪ್ಯಾಕೇಜ್ I ಮತ್ತು IIರ ಮಧ್ಯಸ್ಥಿಕೆ ಮತ್ತು ಹೆಚ್ಚುವರಿ ಸುಧಾರಣೆ | 31.07.2019 | ದಿನಾಂಕ 10 ಜುಲೈ 2020 ಕೆಲಸವು ಪೂರ್ಣಗೊಂಡಿತು |
| 3 | ಮಂಗಳೂರು | 114 | ಕೆಯುಐಡಿಎಫ್‌ಸಿ | ಕೆಐಯುಡಬ್ಲ್ಯೂಎಂಐಪಿ ಅಡಿಯಲ್ಲಿ ಮಂಗಳೂರು ನಗರಕ್ಕೆ 24×7 ನೀರು ಸರಬರಾಜು ಯೋಜನೆ[21] | 28.05.2020 ರಿಂದ 09.02.2023 | ಏಪ್ರಿಲ್ 2023ರವರೆಗೆ ₹114 ಕೋಟಿ ಮೊತ್ತವನ್ನು ಬಳಸಿಕೊಳ್ಳಲಾಗಿದೆ. |
| 4 | | 2.20 | ಎಂಸಿಸಿ | ಸ್ಟೇಟ್ ಬ್ಯಾಂಕ್‌ನಲ್ಲಿ ಸೇವಾ ಬಸ್ ನಿಲ್ದಾಣದ ನಿರ್ಮಾಣ | 01.07.2022 ರಿಂದ 20.10.2022 | ಪೂರ್ಣಗೊಂಡಿದೆ |
| 5 | ದಾವಣಗೆರೆ | 0.87 | ಕೆಯುಐಡಿಎಫ್‌ಸಿ | ಕೆಐಯುಡಬ್ಲ್ಯೂಎಂಐಪಿಯ ಅಡಿಯಲ್ಲಿ ಸರ್ಕಾರದ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೌಚಾಲಯ ನಿರ್ಮಾಣ ಕಾರ್ಯ. | 05.05.2022 | ನಿಧಿಗಳು ಎಸ್‌ಸಿಪಿಯ ಭಾಗವಾಗಿಲ್ಲದಿದ್ದರೂ, ಕೆಐಯುಡಬ್ಲ್ಯೂಎಂಐಪಿ ಅಡಿಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯ ಪಾಲಾಗಿ ಬಿಡುಗಡೆ ಮಾಡಲಾಗಿದೆ. |
| 6 | | 1.14 | ಕೆಯುಐಡಿಎಫ್‌ಸಿ | ಜಲಸಿರಿ ಯೋಜನೆ ಅಡಿಯಲ್ಲಿ ಕುಂದವಾಡ ಜಲ ಶುದ್ಧೀಕರಣ ಘಟಕದಿಂದ ಕಚ್ಚಾ ನೀರು ಸಾಗಣೆ ಪೈಪ್‌ಲೈನ್ ವಿಸ್ತರಣೆ ಕಾಮಗಾರಿ. | 25.06.2021 | ಕೈಬಿಡಲಾದ ಯೋಜನೆಗಳ ಉಳಿತಾಯ ಮೊತ್ತದಿಂದ ನಿಧಿಗಳ ಬಿಡುಗಡೆ ಮಾಡಲಾಯಿತು. |

ಆಧಾರ: ಸ್ಮಾರ್ಟ್ ಸಿಟಿಗಳು ಒದಗಿಸಿದ ಮಾಹಿತಿ

ಮಂಗಳೂರು ಮತ್ತು ದಾವಣಗೆರೆ ಸ್ಮಾರ್ಟ್ ಸಿಟಿಗಳ ಎಸ್‌ಸಿಎಂ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಸರ್ಕಾರಿ ಸಂಸ್ಥೆಗಳು ಮತ್ತು ಬಿಡ್ಡರ್‌ಗಳೊಂದಿಗೆ ತ್ರಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

[21] ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ.

ರಾಜ್ಯ ಸರ್ಕಾರವು ಕಾಮಗಾರಿಗಳನ್ನು ಕೆಯುಐಡಿಎಫ್‌ಸಿ ಮತ್ತು ಇತರ ಏಜೆನ್ಸಿಗಳು ಕೈಗೆತ್ತಿಕೊಂಡಿವೆ ಎಂದು ಉತ್ತರಿಸಿತು (ಏಪ್ರಿಲ್ 2025). ಎಸ್‌ಪಿವಿಗಳಿಂದ ಹಣದ ಬಿಡುಗಡೆಯು ಮಂಡಳಿಯಿಂದ ಅನುಮೋದಿಸಲ್ಪಟ್ಟಿತ್ತು.

ಮಿಷನ್ ನಿಧಿಗಳನ್ನು ಎಸ್‌ಪಿವಿಗಳಿಂದ ಬೇರೆಡೆಗೆ ತಿರುಗಿಸಬಾರದು ಎಂದು ಸೂಚಿಸುವ ಮಿಷನ್ ಮಾರ್ಗಸೂಚಿಗಳ ವಿಸ್ತರಣೆಯ ಸಲಹೆಯನ್ನು ನೀಡಲಾಗಿದ್ದರಿಂದ ಉತ್ತರವು ಸ್ವೀಕಾರಾರ್ಹವಾಗಿರಲಿಲ್ಲ. ಇದಲ್ಲದೆ, ಠೇವಣಿ ಮಾಡಿದ ಹಣವನ್ನು ಬಿಡುಗಡೆಯಾದ ದಿನಾಂಕದಿಂದ ಒಂದರಿಂದ ಎರಡು ವರ್ಷಗಳ ನಂತರ ಮಾತ್ರ ಬಳಸಲಾಗುತ್ತಿತ್ತು, ಇದು ತಕ್ಷಣದ ಅವಶ್ಯಕತೆಯಿರಲಿಲ್ಲ ಎಂದು ಸೂಚಿಸಿತು.

### *3.5.3 ದಂಡದ ವಿಧಿಸುವಿಕೆ ಮತ್ತು ಸಂಗ್ರಹಣೆ*

ಐಸಿಸಿಸಿ ಸೌಲಭ್ಯಕ್ಕಾಗಿ ಮಾಸ್ಟರ್ ಸಿಸ್ಟಮ್ ಇಂಟಿಗ್ರೇಟರ್ (ಎಂಎಸ್‌ಐ)ರ ಸೇವಾ ಪೂರೈಕೆದಾರರನ್ನು ಅಂದಾಜು ₹101.30 ಕೋಟಿ ವೆಚ್ಚಕ್ಕೆ ಅನುಮೋದಿಸಲಾಗಿತ್ತು. ಈ ಕೆಲಸವನ್ನು (ಮಾರ್ಚ್ 2021) ₹95.99 ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು 8 ತಿಂಗಳಲ್ಲಿ ಅಂದರೆ ನವೆಂಬರ್ 2021ರಲ್ಲಿ ಪೂರ್ಣಗೊಳಿಸುವ ಷರತ್ತಿನೊಂದಿಗೆ ಮೆಸರ್ಸ್ ಫ್ಲುಯೆಂಟ್‌ಗ್ರಿಡ್ ಲಿಮಿಟೆಡ್‌ಗೆ ನೀಡಲಾಯಿತು. ಆದಾಗ್ಯೂ, ಐಸಿಸಿಸಿ ಸ್ಥಳವನ್ನು ಅಂತಿಮಗೊಳಿಸುವಲ್ಲಿನ ವಿಳಂಬ, ಬಿಬಿಎಂಪಿಯ ಎಂಟು ವಲಯ ಕೇಂದ್ರಗಳಲ್ಲಿನ ಕಾಮಗಾರಿಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ಡಿಪಿಆರ್ ಅಂತಿಮಗೊಳಿಸುವಲ್ಲಿನ ವಿಳಂಬ ಸೇರಿದಂತೆ ವಿವಿಧ ಅಂಶಗಳಿಂದಾಗಿ, ನವೆಂಬರ್ 2021 ರಿಂದ ಡಿಸೆಂಬರ್ 2023 ರವರೆಗೆ ನಾಲ್ಕು ಬಾರಿ ಸಮಯ ವಿಸ್ತರಣೆ (ಇಒಟಿ) ನೀಡಲಾಗಿತ್ತು ಎಂದು ಲೆಕ್ಕಪರಿಶೋಧನೆಯು ಗಮನಿಸಿತು.

ಈ ಅವಧಿ ವಿಸ್ತರಣೆಗಳಿದ್ದರೂ ಸಹ, ಸಂಬಂಧಿತ ಸಂಸ್ಥೆಯು ಯೋಜನೆಯನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸಲು ವಿಫಲವಾಯಿತು. ಪಿಎಂಸಿ (iDeCK) ವರದಿಯ ಆಧಾರದ ಮೇಲೆ, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ (ಬೆನ್‌ಸಿಎಎಲ್) ಮ್ಯಾನೇಜಿಂಗ್ ಡೈರೆಕ್ಟರ್‌ರವರು ಸಂಸ್ಥೆಗೆ ಜನವರಿ 2023ರಲ್ಲಿ ಒಪ್ಪಂದದ ವಿಧಿ 51.2 ಆರ್‌ಎಫ್‌ಪಿ ಸಂಪುಟ 3ರನುಸಾರ ಕಾಮಗಾರಿಯ ಪೂರ್ಣಗೊಳ್ಳುವಿಕೆಯಲ್ಲಿ ಉಂಟಾದ ವಿಳಂಬಕ್ಕಾಗಿ ₹2.92 ಕೋಟಿ ದಂಡ ವಿಧಿಸುವ ಬಗ್ಗೆ ತಿಳಿಸಿದರು.

ಸದರಿ ವಿಧಿಯ ಪ್ರಕಾರ, ಒಂದು ವಾರದ ವಿಳಂಬಕ್ಕೆ ಶೇಕಡಾ ಒಂದರಂತೆ ದಂಡ ವಿಧಿಸಲಾಗುತ್ತದೆ ಮತ್ತು ಒಂದು ವಾರಕ್ಕಿಂತ ಹೆಚ್ಚು ವಿಳಂಬವಾದಲ್ಲಿ ಶೇಕಡಾ 1.5ರಷ್ಟು ದಂಡ ವಿಧಿಸಲಾಗುತ್ತದೆ ಮತ್ತು ಇದಕ್ಕೆ ಗರಿಷ್ಠ ಮಿತಿಯ ಬಾಕಿ ಕಾಮಗಾರಿಯ ಮೌಲ್ಯದ ಶೇಕಡಾ ಏಳರಷ್ಟಿದೆ. ಸಂಸ್ಥೆಯು ದಂಡವನ್ನು ಮುಕ್ತಾಯ ಮಾಡಲು ವಿನಂತಿ ಸಲ್ಲಿಸಿತು. ಈ ವಿನಂತಿಯನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ನಿರ್ದೇಶಕ ಮಂಡಳಿಯು (29ನೇ ಮಂಡಳಿ ಸಭೆ) ನವೆಂಬರ್ 2023ರಲ್ಲಿ ನಿರಾಕರಿಸಿತು ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ (ಬೆನ್‌ಸಿಎಎಲ್)ರವರಿಗೆ ಸಂಬಂಧಿಸಿದ ಕ್ರಮ ಕೈಗೊಳ್ಳಲು ಅಧಿಕಾರ ನೀಡಿತು.

ಹೆಚ್ಚುವರಿಯಾಗಿ, ಏಜೆನ್ಸಿಯು ಫೆಬ್ರವರಿ 01, 2023 ರಿಂದ ಮಾರ್ಚ್ 31, 2024 ರವರೆಗೆ ಸಮಯವನ್ನು ವಿಸ್ತರಿಸಲು ವಿನಂತಿಸಿತು. ತಾಂತ್ರಿಕ ಸಮಿತಿಯು ದಿನಕ್ಕೆ ₹2,000ದಷ್ಟು ಅತ್ಯಲ್ಪ ದಂಡವನ್ನು ವಿಧಿಸಲು ಶಿಫಾರಸು ಮಾಡಿತು. ಮತ್ತು ಇದನ್ನು ಮಂಡಳಿಯು (ಮಾರ್ಚ್ 2024) ತನ್ನ 30ನೇ ಮಂಡಳಿ ಸಭೆಯಲ್ಲಿ ಅನುಮೋದಿಸಿತು. ಆದಾಗ್ಯೂ, ಟೆಂಡರ್ ಷರತ್ತುಗಳು ಯೋಜನೆಯ ವಿಳಂಬಕ್ಕೆ ದಂಡದ ದರವನ್ನು ಸ್ಪಷ್ಟವಾಗಿ ವಿವರಿಸಿವೆ ಮತ್ತು ಬೆಲೆ ಏರಿಕೆಯಿಲ್ಲದೆ ದಿನಕ್ಕೆ ₹2,000 ದರದಲ್ಲಿ ದಂಡ ವಿಧಿಸುವುದಕ್ಕೆ ಸಮರ್ಥನೆ ಇರಲಿಲ್ಲ ಮತ್ತು ಇದು ಟೆಂಡರ್ ಷರತ್ತುಗಳನ್ನು ವಿಧಿಸದಿರುವಲ್ಲಿ ಪರಿಣಮಿಸಿತು.

ಸರ್ಕಾರವು ತನ್ನ ಉತ್ತರದಲ್ಲಿ ದಂಡವು ₹7.83 ಲಕ್ಷವಾಗುತ್ತದೆ ಆದಾಗ್ಯೂ, ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿನ ವಿಳಂಬವನ್ನು ಪರಿಗಣಿಸಿ ಪಿಎಂಸಿಯು ₹2.92 ಕೋಟಿ ದಂಡವನ್ನು ವಿಧಿಸಲು ಶಿಫಾರಸು ಮಾಡಿತ್ತು ದಂಡ ವಿನಾಯಿತಿ ಪ್ರಸ್ತಾವನೆಯನ್ನು ಮಂಡಳಿಯು ತಿರಸ್ಕರಿಸಿದ್ದರೂ,

ಅದನ್ನು ಸಂಗ್ರಹಿಸಲು ಯಾವುದೇ ಕ್ರಮ ಕೈಗೊಳ್ಳದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ. ವಿಧಿಸಲಾದ ಮತ್ತು ಸಂಗ್ರಹಿಸಿದ ಒಟ್ಟು ದಂಡದ ಮೊತ್ತದ ವಿವರಗಳನ್ನು ಲೆಕ್ಕಪರಿಶೋಧನೆಗೆ ತಿಳಿಸಲಾಗಿಲ್ಲ.

***ಶಿಫಾರಸು 2: ಯೋಜನೆಯ ಅನುಷ್ಠಾನದಲ್ಲಿ ಹೊರಡಿಸಲಾದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಮತ್ತು ಬಡ್ಡಿ ಬಾಕಿಗಳನ್ನು ಸಂಬಂಧಪಟ್ಟ ಕರ್ನಾಟಕ ಸರ್ಕಾರ/ಭಾರತ ಸರ್ಕಾರ ಖಾತೆಗಳಿಗೆ ಪಾವತಿಸುವಂತೆ ಸರ್ಕಾರವು ಎಸ್‌ಎಲ್‌ಎನ್‌ಎಗೆ ನಿರ್ದೇಶಿಸಬೇಕು. ಇದಲ್ಲದೆ, ಯೋಜನೆಯ ಅನುಷ್ಠಾನದಲ್ಲಿನ ವಿಚಲನಗಳು/ವಿಳಂಬಗಳಿಗೆ ಎಸ್‌ಪಿವಿಗಳು ಏಜೆನ್ಸಿಗಳ ಮೇಲೆ ಒಪ್ಪಂದದ ಬಾಧ್ಯತೆಗಳನ್ನು ಹೇರಬೇಕು.***